ಕಳುಹಿಸಿದ್ದು, ಅವರಿಗೆ ಅದು ಹೋಗಿ ತಲುಪಿಲ್ಲವೆಂದು ತೋರುತ್ತದೆ. ಅವರು ಅಲ್ಲಿಗೆ ಬರುತ್ತಾರೆ.

ಶ್ರೀ ಡಿ.ಎನ್. ಜೀವರಾಜ್ : 4 ಜನ ಮಂಗನ ಕಾಯಿಲೆಯಿಂದ ತೀರಿಹೋಗಿದ್ದಾರೆ. ಬಹುಶಃ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ಮಂಗನ ಕಾಯಿಲೆಯಿಂದ ಸತ್ತುಹೋಗಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನಷ್ಟೆ.

ವಿಷಯ : ಹಾವೇರಿ ಜಿಲ್ಲೆಯಲ್ಲಿ ಮಹಿಕೊ ಕಂಪನಿ ವಿತರಿಸಿದ "ಚಮತ್ಕಾರ" ಹತ್ತಿ ಬೀಜದಿಂದ ಬೆಳೆಬಾರದೆ ರೈತರಿಗೆ ತೊಂದರೆ ಉಂಟಾಗಿರುವುದರ ಬಗ್ಗೆ.

ಶ್ರೀ ಶಿವರಾಜ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಎಕರೆ ಪ್ರದೇಶದಲ್ಲಿ ಮಹಿಕೊ ಕಂಪನಿಯ "ಚಮತ್ಕಾರ" ಹತ್ತಿ ಬೀಜವನ್ನು ಬಿತ್ತಿದಂಥ ರೈತರು ಆ ಕಂಪನಿಯ ಕಳಪೆ ಮಟ್ಟ ಬೀಜದ ವಿತರಣೆಯಿಂದಾಗಿ ಯಾವುದೇ ಬೆಳೆ ಬಾರದೆ ಸಂಪೂರ್ಣವಾಗಿ ದಿವಾಳಿಯೆದ್ದು ಸುಮಾರು 3 ತಿಂಗಳಿನಿಂದ ಮಹಿಕೊ ಕಂಪನಿ ಎದುರುಗಡೆ ಹಾಗೂ ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿ ಎದುರುಗಡೆ ಧರಣಿಯನ್ನು ಕೂಡ ಮಾಡಿದರು.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದನ್ನು ದಯವಿಟ್ಟು ನಾಳೆಯ ದಿವಸ ಶ್ರೀ ಶ್ರೀನಿವಾಸಗೌಡರು ಸದನಕ್ಕೆ ಬಂದಾಗ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಿ. ಈ ವಿಚಾರ ಬಹಳ ಮಹತ್ವದ್ದಾಗಿದೆ. ಮಾನ್ಯ ಕೃಷಿ ಸಚಿವರು ಈಗ ಸದನದಲ್ಲಿ ಇಲ್ಲ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಶ್ನೆ ಕೇಳಿದಾಗ ಆ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದ ಮಂತ್ರಿಗಳು ಸದನದಲ್ಲಿ ಇರುತ್ತಾರೆನ್ನುವ ಖಾತ್ರಿ ಏನೂ ಇಲ್ಲವಲ್ಲ ಪಾಟೀಲರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರು ಈಗ ಇಲ್ಲಿ ಇಲ್ಲ, ಬೇಕಾದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕೃಷಿ ಸಚಿವರು ಬಂದ ಮೇಲೆ ಅವರಿಂದ ಸ್ಟೇಟ್‌ಮೆಂಟ್ ಕೊಡಿಸುತ್ತೇವೆ. ಆದ್ದರಿಂದ ನಾಳೆ ಅವರು ಬಂದಾಗ ಇದನ್ನು ಪ್ರಸ್ತಾಪ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು : ಆಯಿತು, ಅವರು ಒಪ್ಪಿದರೆ ಹಾಗೆ ಮಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಇಲ್ಲ ಸರಿ, ನಾಳೆ ಆ ಮಂತ್ರಿಯವರು ಬರುತ್ತಾರೆಂದು ಗ್ಯಾರಂಟಿ ಏನು ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾಳೆ ಆ ಮಂತ್ರಿಯವರು ಇರುತ್ತಾರೆಂದು ಗ್ಯಾರಂಟಿಯನ್ನು ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಾಗಾದರೆ ನಾಳೆ ನಾವು ಇರುತ್ತೇವೆಂದು ಗ್ಯಾರಂಟಿ ಇದೆಯೇ ? ಆ ಗ್ಯಾರಂಟಿಯೂ ಇಲ್ಲ. ಅಂದಮೇಲೆ ನಾಳೆ ಬರುತ್ತಾರೆಯೇ, ಗ್ಯಾರಂಟಿ ಕೊಡಿ ಎಂದು ಕೇಳಿದರೆ ಹೇಗೆ ಹೇಳುವುದು ?

ಶ್ರೀ ಕೆ.ಎಸ್. ಈಶ್ವರಪ್ಪ : ನಾಳೆಯ ದಿವಸ ಆ ಮಂತ್ರಿಯವರು ಬರುತ್ತಾರೆಂದು ಭರವಸೆ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ನಾಳೆಯ ದಿವಸ ಉತ್ತರ ಕೊಡಿಸುತ್ತೇವೆಂದು ಹೇಳಿದ್ದೇವೆ. ಗ್ಯಾರಂಟಿ ಏನು ಎಂದು ಕೇಳಿದರೆ ಏನು ಹೇಳುವುದು ಇದಕ್ಕೆ ? ಇಲ್ಲಿ ಗ್ಯಾರಂಟಿ ಬರೆದುಕೊಡುವುದಕ್ಕಾಗುತ್ತದೆಯೇ ?

ಶ್ರೀ ಶಿವರಾಜ ಸಜ್ಜನರ್ : ರೈತರು ನಿರಂತರವಾಗಿ ಧರಣಿ ಸತ್ಯಾಗ್ರಹವನ್ನು ಮಾಡಿದರೂ ಕೂಡ ಸರ್ಕಾರ ಇಲ್ಲಿಯವರೆಗೆ ಮಹಿಕೊ ಕಂಪನಿಯಿಂದ ಪರಿಹಾರ ಕೊಡಿಸುವಲ್ಲಿ ಸಂಪೂರ್ಣ ವಿಫಲವಾಗಿದೆಯೆಂದು ನಾನು ಭಾವಿಸಿಕೊಳ್ಳಬೇಕಾಗುತ್ತದೆ. ಧರಣಿ ಸತ್ಯಾಗ್ರಹ ನಡೆದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದಂಥ ಮಾನ್ಯ ಹೊರಟ್ಟಿ ಸಾಹೇಬರು ಮತ್ತು ಕೃಷಿ ಮಂತ್ರಿಗಳು ಆ ಭಾಗದ ಎಲ್ಲ ರೈತರು, ಕಂಪನಿಯ ಪ್ರತಿನಿಧಿಗಳು ಹಾಗೂ ನಮ್ಮನ್ನು ಕೂಡ ಆ ಸಭೆಗೆ ಕರೆದಿದ್ದರು. ನಾಲ್ಕೈದು ಸಭೆಗಳಾಗಿದ್ದರೂ ಕೂಡ ಇವತ್ತಿಗೂ ಕಂಪನಿಯವರು ರೈತರಿಗೆ ಪರಿಹಾರವನ್ನು ಕೊಡುವುದರಲ್ಲಿ ಹಿಂದೆಮುಂದೆ ನೋಡುತ್ತಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಭಾಗದ ಸುಮಾರು 20 ಸಾವಿರ ಎಕರೆ ಪ್ರದೇಶದಲ್ಲಿ

ಸುಮಾರು ಐದಾರು ಸಾವಿರ ಜನ ರೈತರು ಈ ಹತ್ತಿಯನ್ನು ಬೆಳೆದು ಸಂಪೂರ್ಣ ದಿವಾಳಿಯಾಗಿದ್ದಾರೆ. ಈ ಚಮತ್ಕಾರ ಹತ್ತಿ ಬೆಳೆದ ಹೊಲದ ಬಾಜುವಿನಲ್ಲಿಯೇ ಜೈಧರ್ ಹತ್ತಿಯನ್ನು ಬೆಳೆದಂಥ ರೈತರು ಎಕರೆಗೆ 4 ಕ್ವಿಂಟಾಲ್‌ವರೆಗೆ ಇಳುವರಿಯನ್ನು ಪಡೆದಿದ್ದಾರೆ. ಅದಕ್ಕೆ ಮಹಿಕೊ ಕಂಪನಿಯವರು ವಿತರಣೆ ಮಾಡಿದಂಥ ಈ ಬೀಜ ಸಂಪೂರ್ಣ ಕಳಪೆ ಮಟ್ಟದ್ದಾಗಿರುವುದರಿಂದ ತಾವು ಮತ್ತು ಈ ಕೃಷಿ ಮಂತ್ರಿಗಳು ಮಧ್ಯದಲ್ಲಿ ಆ ಕಂಪನಿಯ ಪ್ರತಿನಿಧಿಗಳನ್ನು, ರೈತ ಪ್ರತಿನಿಧಿಗಳನ್ನು ಹಾಗೂ ಆ ಜಿಲ್ಲೆಯ ಶಾಸಕರುಗಳನ್ನು ಕರೆಸಿ ಆದಷ್ಟು ಶೀಘ್ರದಲ್ಲಿ ರೈತರಿಗೆ ಪರಿಹಾರ ಕೊಡಿಸುವಂಥ ವ್ಯವಸ್ಥೆಯಾಗಬೇಕು. ಇದು ಹಾವೇರಿ ಜಿಲ್ಲೆಯಲ್ಲಿ ಮಾತ್ರ ನಡೆದಿಲ್ಲ, ಪಕ್ಕದ ಧಾರವಾಡ, ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕು ಮತ್ತು ಇನ್ನಿತರ ತಾಲ್ಲೂಕುಗಳಲ್ಲಿ ಕೂಡ ಅನೇಕ ಜನ ರೈತರು ಈ ಹತ್ತಿಯನ್ನು ಬೆಳೆದು ಸಂಪೂರ್ಣ ದಿವಾಳಿಯಾಗಿದ್ದಾರೆ. ಆದಷ್ಟು ಶೀಘ್ರದಲ್ಲಿ ರೈತರಿಗೆ ಪರಿಹಾರ ಕೊಡಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಸಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್ (ಹರಪನಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಶ್ರೀ ಸಜ್ಜನ್‌ರವರು ಪ್ರಸ್ತಾಪ ಮಾಡಿದ್ದಾರೆ. ಇದು ಕೇವಲ ಹಾವೇರಿ ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ಕೂಡ ಈ ಚಮತ್ಕಾರ ಹತ್ತಿಯನ್ನು ಬೆಳೆದಿರತಕ್ಕ ಸುಮಾರು 1500 ರೈತರು ಈ ಸಂಕಷ್ಟಕ್ಕೆ ಸಿಲುಕಿದ್ದಾರೆ. ನನ್ನ ಕ್ಷೇತ್ರದಲ್ಲಿ ಸಹ ಈ ಸಮಸ್ಯೆ ಇದೆ. ಈ ವಿಚಾರದಲ್ಲಿ ರೈತರಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದಾಗ ಅದರಲ್ಲಿ ನನ್ನ ಕ್ಷೇತ್ರವನ್ನು ಕೂಡ ತಾವು ಸೇರಿಸಿಕೊಂಡು ಒಟ್ಟಿಗೆ ಎಲ್ಲೆಲ್ಲಿ ಈ ಸಮಸ್ಯೆಯಿಂದ ರೈತರಿಗೆ ತೊಂದರೆಯಾಗಿದೆ ಅಲ್ಲಿ ಎಲ್ಲ ಕಡೆಗಳಲ್ಲಿ ಆ ರೈತರಿಗೆ ಪರಿಹಾರವನ್ನು ಕೊಡಲಿಕ್ಕೆ ಸರ್ಕಾರ ಮುಂದಾಗಬೇಕೆಂದು ತಮ್ಮ ಮುಖೇನ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಚಮತ್ಕಾರ ಎನ್ನುವ ಹತ್ತಿ ಬೀಜ ಇದು ಬಹಳ ಕಡೆ ಚಮತ್ಕಾರ ಮಾಡಿದೆಯೆಂದು ಕಾಣುತ್ತದೆ. ಚಮತ್ಕಾರ ಎಂದು ಒಳ್ಳೆಯ ಹೆಸರನ್ನು ಇಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಶ್ರೀ ಸಜ್ಜನರ್‌ರವರು ಹೇಳಿದ ಹಾಗೆ ಮಾಟಿಂಗ್

ಮಾಡಿದ್ದಾರೆ. ಆ ಬೀಜ ಸಪ್ಲೈ ಮಾಡಿದವರನ್ನು ಕೂಡ ಕರೆದು ಚರ್ಚೆ ಮಾಡಿದ್ದಾರೆ. ಆದರೆ ಇನ್ನೂ ಕೂಡ ಆ ರೈತರಿಗೆ ಪರಿಹಾರ ಕೊಟ್ಟಿಲ್ಲವೆನ್ನುವ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕೃಷಿ ಸಚಿವರಾದ ಶ್ರೀ ಶ್ರೀನಿವಾಸಗೌಡರಿಗೆ ನಾನು ಅದನ್ನು ಹೇಳಿ ಮತ್ತೆ ಅದಕ್ಕೆ ಸಭೆ ಮಾಡಿಸಿ ಸಂಬಂಧಪಟ್ಟಂಥ ಆ ಭಾಗದ, ಮತ್ತೆ ಇಲ್ಲಿ ಹರಪನಹಳ್ಳಿ ಶಾಸಕರು ಕೂಡ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಜ್ಜನ್‌ರವರು ಪ್ರಸ್ತಾಪ ಮಾಡಿ ಧಾರವಾಡ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲಿ ಆಗಿದೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಅದರ ಬಗ್ಗೆ ಒಂದು ತೀರ್ಮಾನ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ನಾನು ಸೂಚಿಸುತ್ತೇನೆ. ಅದರಂತೆ ಅವರು ಕ್ರಮ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಲಾಗುವುದು.

ವಿಷಯ : ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಪ್ರಸ್ತಾಪ ಮಾಡಲಿಕ್ಕೆ ಹೊರಟಿರುವಂಥದ್ದು ಏನೆಂದರೆ, ಇಡೀ ರಾಜ್ಯದ ಗ್ರಾಮ ಪಂಚಾಯತ್‌ಗಳಿಗೆ ಆಗುತ್ತಿರುವಂಥ ತೊಂದರೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರಾಯಶಃ ನಮ್ಮ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಮಾನ್ಯ ಅರ್ಥ ಸಚಿವರು ಮತ್ತು ಮಾನ್ಯ ಇಂಧನ ಸಚಿವರು ಇದಕ್ಕೆ ಸ್ಪಂದಿಸಬೇಕಾಗುತ್ತದೆ. ಇವತ್ತು ದಾರಿದೀಪಗಳನ್ನು ಅಳವಡಿಸಬೇಕಾದರೆ ಹಿಂದೆ ಗ್ರಾಮಪಂಚಾಯತ್‌ಗಳಲ್ಲಿ ಇದ್ದದ್ದು ಶೇಕಡ 10 ಅನ್ನು supervision charge ಆಗಿ MESCOM ಅಥವಾ ಯಾವುದಾದರೂ ESCOM ಕಂಪನಿಗಳಿಗೆ ಕಟ್ಟಿ ಉಳಿದ ಎಲ್ಲ ಕಾಮಗಾರಿಗಳನ್ನು ವಿದ್ಯುತ್ ಇಲಾಖೆಯವರೇ ಮಾಡಿಕೊಡುವಂಥ ಕಾನೂನು ಇತ್ತು. ಆದರೆ 16.12.2004ರಲ್ಲಿ ರಾಜ್ಯಸರ್ಕಾರ ಒಂದು ಹೊಸ ಆದೇಶವನ್ನು ಹೊರಡಿಸಿದೆ. ಆ ಆದೇಶದಲ್ಲಿ ಏನಿದೆಯೆಂದರೆ – ಇನ್ನು ಮುಂದೆ ಗ್ರಾಮಪಂಚಾಯತ್‌ಗಳಿಗೆ ದಾರಿದೀಪಗಳನ್ನು ಅಳವಡಿಸಬೇಕಾದರೆ 10% supervision charge ಅನ್ನು ಗ್ರಾಮಪಂಚಾಯತ್‌ನವರೇ ಕಟ್ಟಬೇಕು. ಅದರ ನಂತರ ಪೂರ್ತಿ 100% ಕಾಮಗಾರಿಗಳನ್ನು ಗ್ರಾಮಪಂಚಾಯತಿಯವರ ವತಿಯಿಂದಲೇ ನಡೆಸಿಕೊಂಡು ಹೋಗಬೇಕೆನ್ನುವಂಥ ಹೊಸ ಆದೇಶವನ್ನು ಸರ್ಕಾರ ಮಾಡಿದೆ. ಇವತ್ತು water supply ಯ LT ಗೂ ಅದೇ ಕಾನೂನನ್ನು ಅಳವಡಿಸಿದ್ದಾರೆ. ಅದೇ ರಾಜ್ಯಪತ್ರದಲ್ಲಿ